**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

**ಆಯವ್ಯಯ**
**ಮೊದಲ ಆದ್ಯತೆ**

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ:257,ವಿಧಾನ ಸೌಧ,

ಸಂಖ್ಯೆ: ಆಇ 16 ಬಿಪಿಇ 2010 ಬೆಂಗಳೂರು, ದಿ: 2ನೇ ನವೆಂಬರ್ 2010.

## ಸುತ್ತೋಲೆ

**ವಿಷಯ** :– 2011–12ನೇ ಸಾಲಿನ ಆಯವ್ಯಯ – ರಾಜಸ್ವ ಮತ್ತು ಬಂಡವಾಳ ಜಮೆ ಅಂದಾಜುಗಳ ತಯಾರಿಕೆ.

* * * * *

2011–12ನೇ ಸಾಲಿನ ಆಯವ್ಯಯ ದಿನಾಂಕ ಪಟ್ಟಿ ಬಗ್ಗೆ ಹೊರಡಿಸಲಾದ ದಿನಾಂಕ: 15–10–2010 ರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಆಇ 14 ಬಿಪಿಇ 2010 ರತ್ತ ಗಮನ ಸೆಳೆಯಲಾಗಿದೆ.

2. ಜಿಲ್ಲಾ ವಲಯದ ಸ್ಥಾಪನೆಯಿಂದಾಗಿ, ಕೆಲವು ಕ್ಷೇತ್ರ ಇಲಾಖೆಗಳನ್ನು ಜಿಲ್ಲಾ ಪಂಚಾಯತ್‌ಗೆ / ತಾಲ್ಲೂಕು ಪಂಚಾಯತ್‌ಗೆ / ಗ್ರಾಮ ಪಂಚಾಯತ್‌ಗೆ ವರ್ಗಾಯಿಸಲಾಗಿದೆ. ಆದ್ದರಿಂದ, ಜಿಲ್ಲಾ ಪಂಚಾಯತ್‌ಗಳು / ತಾಲ್ಲೂಕು ಪಂಚಾಯತ್‌ಗಳು / ಗ್ರಾಮ ಪಂಚಾಯತ್‌ಗಳು ವಸೂಲಿ ಮಾಡಿದ ರಾಜಸ್ವ ಜಮೆಗಳನ್ನು ರಾಜ್ಯದ ಸಂಚಿತ ನಿಧಿಗೆ ತುಂಬಬೇಕು. ರಾಜ್ಯ ಮಟ್ಟದ ಮುಖ್ಯ ನಿಯಂತ್ರಣಾಧಿಕಾರಿಗಳು ಮತ್ತು ಅಂದಾಜು ತಯಾರಿಸುವ ಅಧಿಕಾರಿಗಳು ಜಿಲ್ಲಾ ಪಂಚಾಯತ್‌ಗಳ / ತಾಲ್ಲೂಕು ಪಂಚಾಯತ್‌ಗಳ / ಗ್ರಾಮ ಪಂಚಾಯತ್‌ಗಳ ಅಧೀನದಲ್ಲಿರುವ ಕ್ಷೇತ್ರ ಇಲಾಖೆಗಳಿಂದ ಅಂತಹ ಜಮೆಗಳ ಅಂದಾಜುಗಳನ್ನು ತರಿಸಿಕೊಂಡು ತಮ್ಮ ಅಂದಾಜಿನಲ್ಲಿ ಸೇರಿಸತಕ್ಕದ್ದು.

3. ರಾಜಸ್ವ ಜಮೆಗಳ ವಿವಿಧ ತೆರಿಗೆ ಮತ್ತು ತೆರಿಗೆಯೇತರ ಬಾಬ್ತುಗಳ ಅಂದಾಜುಗಳನ್ನು ತಯಾರಿಸುವಲ್ಲಿ ಈ ಕೆಳಗಿನ ಸೂಚನೆಗಳನ್ನು ಗಮನದಲ್ಲಿಡತಕ್ಕದ್ದು:–

ಅ) ರಾಜ್ಯ ತೆರಿಗೆ ಸ್ವೀಕೃತಿಗಳ ಅಂದಾಜುಗಳು ರಾಜ್ಯ ಸರ್ಕಾರದ ಸಂಬಂಧಿಸಿದ ಅಧಿನಿಯಮಗಳ ಅಡಿಯಲ್ಲಿ ವಿಧಿಸಲಾಗುವ ತೆರಿಗೆ ದರ, ಸುಂಕ ಮತ್ತು ಶುಲ್ಕದ ಪ್ರಸಕ್ತ ದರದ ಆಧಾರದ ಮೇಲೆ ಇರತಕ್ಕದ್ದು. ಈ ಮುನ್ನ ರೂಪಿಸಿದ ಅಂದಾಜುಗಳ ಮೇಲೆ ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳನ್ನು ತಯಾರಿಸುವಲ್ಲಿ; ಅಂದಾಜು ತಯಾರಿಸುವ ಅಧಿಕಾರಿಗಳು, ನಿಗದಿಪಡಿಸಿದ ಗುರಿ, ವಾಸ್ತವಿಕ ಪ್ರಗತಿ, ಈಗಿನ ತೆರಿಗೆಗಳನ್ನು ಹೆಚ್ಚಿಸಿದರ ಪರಿಣಾಮವಾಗಿ ನಿರೀಕ್ಷಿಸಿದ ಹೆಚ್ಚುವರಿ ಆದಾಯ, ತೆರಿಗೆಗಳನ್ನು ರದ್ದುಪಡಿಸಿದ ಅಥವಾ ಇಳಿಸಿದ್ದರ ಪರಿಣಾಮವಾಗಿ ರಾಜಸ್ವ ನಷ್ಟದ ಅಂದಾಜು ಮುಂತಾದ ವಿಷಯಗಳನ್ನು ಆಯವ್ಯಯ ಅಂದಾಜುಗಳನ್ನು ಮಂಡಿಸಿದ ತರುವಾಯ ರಾಜ್ಯ ಶಾಸನ ಸಭೆ ಅಂಗೀಕರಿಸಿದ ಇಂತಹ ತೆರಿಗೆ ಕಾನೂನುಗಳನ್ನು ಜಾರಿಗೆ ತಂದಿದ್ದರ ಪರಿಣಾಮವಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಆ) ಮುಂದಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳು ಕೇವಲ ಪ್ರಸಕ್ತ ವರ್ಷಕ್ಕೆ ತಯಾರಿಸಿದ ಪರಿಷ್ಕೃತ ಅಂದಾಜುಗಳ ಪುನರಾವರ್ತನೆಯಾಗಬಾರದು. ಆದರೆ, ವಸೂಲಾಗಬೇಕಾದ ತೆರಿಗೆ, ಮುಂದಿನ ವರ್ಷದ ಬೇಡಿಕೆ ತೆರಿಗೆ ರಾಜಸ್ವಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಹೆಚ್ಚು ಬೆಳವಣಿಗೆ ಪ್ರಮಾಣದ ಗ್ರಹಿಕೆ ಮತ್ತು ಹಿಂದಿನ ವರ್ಷಗಳ ಕಾರ್ಯ ಸಾಮರ್ಥ್ಯ, ಪ್ರಸಕ್ತ ವರ್ಷದ ವಾಸ್ತವಿಕಗಳ ಪ್ರಗತಿ/ ಪ್ರವೃತ್ತಿ ಮೇಲಿನ 3(ಅ) ನೇ ವಾಕ್ಯವೃಂದದಲ್ಲಿ ಉಲ್ಲೇಖಿಸಲಾದ ತೆರಿಗೆ ವ್ಯವಸ್ಥೆಗೆ ಸಂಬಂಧಿಸಿದ ಹೊಸ ಕ್ರಮಗಳಿಂದಾದ ಪರಿಣಾಮ ಮುಂತಾದ ಸೂಕ್ತ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಇ) ಬೇಡಿಕೆ, ವಸೂಲಾತಿ ಮತ್ತು ಶಿಲ್ಕು ವಿವರಣೆಯನ್ನು ತೆರಿಗೆ ರಾಜಸ್ವ ಅಂದಾಜುಗಳ ಜೊತೆಯಲ್ಲಿ ಕಳುಹಿಸಬೇಕು. ವರ್ಷಾವಾರು ಬಾಕಿಯನ್ನು ಲಗತ್ತಿಸಿರುವ ಅನುಬಂಧ II ರಂತೆ ಪ್ರತ್ಯೇಕವಾಗಿ ತೋರಿಸಬೇಕು. ಈ ವಿವರಣೆ ಸಂಗ್ರಹಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸೂಚನೆ ಕೊಟ್ಟಿದ್ದರೂ, ಕೆಲವು ಇಲಾಖೆಗಳು ಹಿಂದಿನ ವರ್ಷಗಳಲ್ಲಿ ಒದಗಿಸಿರುವುದಿಲ್ಲ.

4. (ಅ) ರಾಜಸ್ವ ಸ್ವೀಕೃತಿಯಲ್ಲಿ ತೆರಿಗೆಯೇತರ ರಾಜಸ್ವದ ಪಾಲು 2004–05ನೇ ಸಾಲಿನಲ್ಲಿ ಶೇ.17 ರಷ್ಟಿದ್ದು 2009–10 ಸಾಲಿನಲ್ಲಿ ಶೇ.6.78ಕ್ಕೆ ಇಳಿಮುಖಗೊಂಡಿದೆ. ಪ್ರಮುಖವಾಗಿ ವಸೂಲಾತಿಗಳ ಇಳಿಕೆ ಮತ್ತು ಕ್ಷೀಣತೆ, ಸಾರ್ವಜನಿಕ ಮಹೋದ್ಯಮಗಳ ಕಳಪೆ ನಿರ್ವಹಣೆ, ನೀರಾವರಿ, ಕುಡಿಯುವ ನೀರು ಸರಬರಾಜು, ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಹಾಗೂ ನಗರ ಆರೋಗ್ಯ ಸೇವೆಗಳ ಲಾಭದಾಯಕವಲ್ಲದ ಬೆಲೆ ನಿಗದಿಯಿಂದಾಗಿ ಆವೃತ್ತ ಸಹಾಯ ಧನಗಳಿಂದಾಗಿ ಜಿಎಸ್‌ಡಿಪಿಗೆ ಹೋಲಿಸಿದಲ್ಲಿ ತೆರಿಗೆಯೇತರ ರಾಜಸ್ವದ ಅನುಪಾತ ಪ್ರಮಾಣವು ಕಡೆಗಣಿಸುವಷ್ಟಿರುತ್ತದೆ.

(ಆ) ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಚಟುವಟಿಕೆಗಳಿಗಾಗಿ ಸರ್ಕಾರದ ಕಂಪನಿಗಳು, ನಿಗಮಗಳು, ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಇತ್ಯಾದಿಗಳಿಗೆ ನೀಡಿರುವ ಸಾಲದ ಬಾಕಿಯ ವಿಶ್ಲೇಷಣೆ ಸಾಲದ ಬಾಕಿ ಪ್ರಮಾಣ ಹೆಚ್ಚಾಗುತ್ತಿರುವುದನ್ನು ಹಾಗೂ ಮರುಪಾವತಿಗಳು ಸ್ಥಿರವಾಗುತ್ತಿರುವುದನ್ನು ತೋರಿಸುತ್ತದೆ. 2010 ರ ಮಾರ್ಚ್ ಅಂತ್ಯಕ್ಕೆ ಸಾಲದ ಬಾಕಿಯು 8602 ಕೋಟಿ ರೂ. ಗಳಷ್ಟಿರುತ್ತದೆ. ಇದರಲ್ಲಿ ಶಾಸನಬದ್ಧ ನಿಗಮಗಳು, ಸರ್ಕಾರಿ ನಿಗಮಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಂದ 469.46 ಕೋಟಿ ರೂ.ಗಳ ಅಸಲು ಮತ್ತು 846.26 ಕೋಟಿ ರೂ.ಗಳ ಬಡ್ಡಿ ಬಾಕಿಯಿರುತ್ತದೆ.

(ಇ) ಹೂಡಿಕೆಗಾಗಿ ಸರ್ಕಾರವು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯಲ್ಲಿ ಸಾಲಗಳನ್ನು ಪಡೆಯುತ್ತಿದ್ದಾಗ್ಯೂ, ಹೂಡಿಕೆಗಳ ಮೇಲಣ ವಾಪಸಾತಿಯು ಬಹಳ ಕಡಿಮೆ ಇದೆ. ಆಡಳಿತ ಇಲಾಖೆಗಳಿಂದ ಕಾಲಕಾಲಕ್ಕೆ ಕ್ರಮಬದ್ಧವಾಗಿ ನಡೆಸಬೇಕಾಗಿದ್ದ ಮೇಲ್ವಿಚಾರಣೆಯ ಕೊರತೆ ಮತ್ತು ಬಳಕೆ ಶುಲ್ಕಗಳನ್ನು ಪರಿಷ್ಕರಿಸದಿರುವುದು ತೆರಿಗೆಯೇತರ ರಾಜಸ್ವವು ನಿಶ್ಚಲಗೊಳ್ಳಲು ಮುಖ್ಯ ಕಾರಣಗಳಲ್ಲೊಂದಾಗಿದೆ. ಬಳಕೆ ಶುಲ್ಕಗಳ ಪರಿಷ್ಕರಣೆಯು ಹೂಡುವಳಿ ವೆಚ್ಚಕ್ಕೆ ಸೂಚ್ಯಂಕ ಸಂಪರ್ಕ ಹೊಂದಿರಬೇಕು ಮತ್ತು ಕಾಲಕಾಲಕ್ಕೆ ಪರಿಷ್ಕರಿಸುವ ಕಾರ್ಯ ವಿಧಾನವು ಸ್ವಯಂಚಾಲಿತವಾಗಿರಬೇಕೆಂದು 11ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುತ್ತದೆ.

(ಈ) **ಆದ್ದರಿಂದ, ಎಲ್ಲಾ ಆಡಳಿತ ಇಲಾಖೆಗಳು ಎಲ್ಲಾ ತೆರಿಗೆಯೇತರ ರಾಜಸ್ವ ಮೂಲಗಳ ಮತ್ತು ತೆರಿಗೆಯೇತರ ರಾಜಸ್ವ ದರಗಳ/ಬಳಕೆ ಶುಲ್ಕಗಳ ಪರಿಷ್ಕರಣೆ ಕಾರ್ಯದ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.**

(ಉ) ಹಾಗೆಯೇ ವಿವಿಧ ಸಾರ್ವಜನಿಕ ಉದ್ದಿಮೆಗಳು, ಸಹಕಾರಿ ಸಂಘಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಂದ ಷರತ್ತು ಮತ್ತು ನಿಬಂದನೆಗಳೊಂದಿಗೆ ಕಾಲಕಾಲಕ್ಕೆ ಮರುಪಾವತಿಸುವ ಆಧಾರದ ಮೇಲೆ ನೀಡಲಾಗಿರುವ ಬಡ್ಡಿ ಸ್ವೀಕೃತಿಗಳು, ಲಾಭಾಂಶಗಳು, ಬಂಡವಾಳ ಮರುಸಂಗ್ರಹ ಮತ್ತು ಇತರೇ **ಇಲಾಖಾ ಸಾಲಗಳನ್ನು ಸಂಗ್ರಹಿಸಲು ಪ್ರಯತ್ನಿಸತಕ್ಕದ್ದು. ಈ ಉದ್ದೇಶಕ್ಕಾಗಿ**

**2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ವಾಸ್ತವಿಕ ಅಂಶಗಳನ್ನೊಳಗೊಂಡ ಮಾಹಿತಿಯನ್ನು ಕಳುಹಿಸಿಕೊಡತಕ್ಕದ್ದು**. ಆಡಳಿತ ಇಲಾಖೆಗಳಲ್ಲಿ ಆಯವ್ಯಯ ಅಂದಾಜುಗಳಲ್ಲಿನ ಗುರಿ ಸಾಧನೆಗೆ ಕಟ್ಟುನಿಟ್ಟಿನ ಬಿಗಿ ಕ್ರಮ ಕೈಗೊಳ್ಳತಕ್ಕದ್ದು.

(ಊ) 2010–11ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2010–11ರ ಪರಿಷ್ಕೃತ ಅಂದಾಜುಗಳ ನಡುವಿನ ಮತ್ತು 2010–11ರ ಪರಿಷ್ಕೃತ ಅಂದಾಜುಗಳ ಮತ್ತು 2011–12ನೇ ಸಾಲಿನ ಆಯವ್ಯಯ ಅಂದಾಜುಗಳ ನಡುವಿನ ಬದಲಾವಣೆಗಳ ವ್ಯತ್ಯಾಸಗಳನ್ನು ಲಗತ್ತಿಸಲಾದ ಅನುಬಂಧ–1ರ ಪ್ರಪತ್ರದಲ್ಲಿ ವಿವರವಾಗಿ ಒದಗಿಸಬೇಕು. ಮೇಲೆ ಉಲ್ಲೇಖಿಸಲಾದ ಅಂದಾಜುಗಳ ನಡುವಿನ ಪ್ರತಿ ಬಾಬ್ತುವಾರು ವ್ಯತ್ಯಾಸಗಳು ಮತ್ತು ಸಂದರ್ಭಾನುಸಾರ ಇಳಿತ ಮತ್ತು ಹೆಚ್ಚಳಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರಣಗಳನ್ನು ಅದರಲ್ಲಿ ತೋರಿಸಬೇಕು. ವ್ಯತ್ಯಾಸಗಳನ್ನು ತೋರಿಸುವ ಕಾರಣಗಳು ನಿರ್ದಿಷ್ಟವಾಗಿರಬೇಕು ಮತ್ತು ವಿವರವಾಗಿರಬೇಕು.

5. 2011–12ನೇ ಆರ್ಥಿಕ ವರ್ಷವು 2007–2012ರ ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ಐದನೇ ವರ್ಷವಾಗಿರುತ್ತದೆ. ವಾರ್ಷಿಕ ಯೋಜನೆಗಳಿಗೆ ಹಿಂದಿನ ಯೋಜನಾ ಅವಧಿಯ ಬದ್ಧಿತ ವೆಚ್ಚಗಳಿಗೆ, ಕಾಲಕಾಲಕ್ಕೆ ತುಟ್ಟಿಭತ್ಯದ ಶಿಸ್ತುಪಾಲನೆ ಮತ್ತು ಸಮಾಜ ಕಲ್ಯಾಣ ಕಾರ್ಯಗಳು ಮುಂತಾದವುಗಳಿಗೂ ಹಣ ಒದಗಿಸಲು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗುತ್ತದೆ. ಆದ್ದರಿಂದ ಇಲಾಖಾ ಮುಖ್ಯಸ್ಥರುಗಳು, ಬಾಕಿ ವಸೂಲಾತಿಗೆ ತೀವ್ರ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. 'ತೆರಿಗೆಯೇತರ ರಾಜಸ್ವ ವಸೂಲಾತಿಯನ್ನು ಈಗಿನ ವಸೂಲಾತಿ ಮಟ್ಟಕ್ಕಿಂತ ಹೆಚ್ಚಿಸಲು ಪ್ರಯತ್ನಗಳನ್ನು ಮಾಡಬೇಕು. ಪ್ರಸಕ್ತ ಅಥವಾ ಹೊಸ ಮೂಲಗಳಿಂದ ಅಧಿಕ ಸಂಪನ್ಮೂಲಗಳನ್ನು ಸಂಗ್ರಹಿಸುವ ಸಾಧ್ಯತೆಗಳ ಬಗ್ಗೆ ಸಹ ಇಲಾಖಾ ಮುಖ್ಯಸ್ಥರುಗಳು ಪರಿಶೀಲಿಸಿ ಸರ್ಕಾರಕ್ಕೆ ತಿಳಿಸಬೇಕು. "ತೆರಿಗೆ ರಾಜಸ್ವ"ದ ಅಡಿಯಲ್ಲಿ ಸಂಗ್ರಹಿಸುವ ಹೆಚ್ಚುವರಿ ಸಂಪನ್ಮೂಲಗಳಿಗೆ ಸಂಬಂಧಿಸಿದ ಪ್ರಸ್ತಾವಗಳನ್ನು **"ಅತ್ಯಂತ ರಹಸ್ಯ"** ಎಂದು ಪರಿಗಣಿಸಿ ಇದರ ಕೆಳಗೆ ನಮೂದಿಸಿರುವವರ ಹೆಸರಿಗೆ ಕಳುಹಿಸತಕ್ಕುದ್ದು.

6. **"ಇತರೇ ಸ್ವೀಕೃತಿಗಳು"** ಲೆಕ್ಕ ಶೀರ್ಷಿಕೆಯಡಿ ಹೆಚ್ಚಿನ ಮೊತ್ತದ ರಾಜಸ್ವವನ್ನು ತೋರಿಸಿಕೊಂಡು ಬರಲಾಗುತ್ತಿದೆ. ಇದನ್ನು ತಪ್ಪಿಸಬೇಕು. ಪ್ರಧಾನ ಲೆಕ್ಕ ಶೀರ್ಷಿಕೆಯಡಿ ದೊರೆಯುವ ಉಪ–ಲೆಕ್ಕ ಶೀರ್ಷಿಕೆಗಳಡಿ ನಿಖರವಾಗಿ ರಾಜಸ್ವವನ್ನು ತೋರಿಸತಕ್ಕದ್ದು. ಈ ಉದ್ದೇಶಕ್ಕಾಗಿ ಅವಶ್ಯವಿರುವ ಎಲ್ಲಾ ವಿವರಗಳನ್ನು ಅವಧಿಗಿಂತ ಮುಂಚಿತವಾಗಿ ಒದಗಿಸಲು ಸಕಾಲದಲ್ಲಿ ತಮ್ಮ ಅಧೀನ ಅಧಿಕಾರಿಗಳಿಂದ / ಕಛೇರಿಗಳಿಂದ ಎಲ್ಲಾ ವಿವರಗಳನ್ನು ಪಡೆದುಕೊಳ್ಳತಕ್ಕದ್ದು.

7. ಈ ಹಿಂದೆ ಸಾಕಷ್ಟು ಸಾಲಗಳನ್ನು ಮಂಜೂರು ಮಾಡಲಾಗಿದ್ದು, ಅವುಗಳು ಇನ್ನೂ ಬಾಕಿಯಾಗಿಯೇ ಉಳಿದಿವೆ. ಬಾಕಿ ಇರುವ ಸಾಲಗಳು, ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳನ್ನು ಉದ್ದರಿಸಿ ಸಾಲ ಸ್ವೀಕೃತಿಗಳ ಅಂದಾಜುಗಳನ್ನು 2011–12ರಲ್ಲಿ ನಿರೀಕ್ಷಿಸಲಾದ ವಸೂಲಾತಿಯ ಆಧಾರದ ಮೇಲೆ ತಯಾರಿಸುವುದು. ಅನುಬಂಧ– III ರಂತೆ ಸಾಲಗಳ ಬೇಡಿಕೆ, ವಸೂಲಿ, ಶಿಲ್ಕಿನ ವಿವರಣೆಯೊಂದಿಗೆ ಆ ಅಂದಾಜುಗಳಿರತಕ್ಕದ್ದು.

8. ಅಂದಾಜುಗಳನ್ನು ಅಂತಿಮಗೊಳಿಸಲು ಸಾಕಷ್ಟು ಕಾಲಾವಧಿಯು ಅಂದಾಜು ತಯಾರಿಸುವ ಅಧಿಕಾರಿಗಳಿಗಿದೆ. ಜಮೆ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ತಪ್ಪದೆ 2010ರ ನವೆಂಬರ್ 20 ರಂದು ಅಥವಾ ಅದಕ್ಕೂ ಮುಂಚಿತವಾಗಿ ತಲುಪುವಂತೆ ಕಳುಹಿಸಿಕೊಡತಕ್ಕದ್ದು ಮತ್ತು ಈ ಬಗ್ಗೆ ವಿಳಂಬಕ್ಕೆ ಯಾವುದೇ ಅವಕಾಶವನ್ನು ಕೊಡತಕ್ಕದ್ದಲ್ಲ. ಎಲ್ಲ ಆಯವ್ಯಯ ಪತ್ರ ವ್ಯವಹಾರಗಳನ್ನು, ಸರ್ಕಾರದ ಉಪ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ ಇವರ ಹೆಸರಿಗೆ ಕಳುಹಿಸತಕ್ಕದ್ದು, ಸ್ವೀಕೃತಿ ಅಂದಾಜುಗಳನ್ನು ಆರ್ಥಿಕ ಇಲಾಖೆಯ ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆಗೆ (ಕೊಠಡಿ ಸಂಖ್ಯೆ: 257) ನೇರವಾಗಿ ತಲುಪಿಸಲು ವ್ಯವಸ್ಥೆ ಮಾಡತಕ್ಕದ್ದು.

9. ಆಂತರಿಕ ಆರ್ಥಿಕ ಸಲಹೆಗಾರರನ್ನು ಹೊಂದಿರುವ ಸಚಿವಾಲಯ ಇಲಾಖೆಗಳ ನಿಯಂತ್ರಣದಲ್ಲಿರುವ ಇಲಾಖೆಗಳು ಆಯವ್ಯಯ ಅಂದಾಜುಗಳ ವಿವರವಾದ ಪರಿಶೀಲನೆಯ ನಂತರ

ಆರ್ಥಿಕ ಇಲಾಖೆಗೆ ಕಳುಹಿಸಲನುಕೂಲವಾಗುವಂತೆ ಆ ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರಿಗೆ ಅಂದಾಜುಗಳನ್ನು ಕಳುಹಿಸಬೇಕು.

10. ನಮೂನೆಯನ್ನೊಳಗೊಂಡ ಈ ಸುತ್ತೋಲೆಯನ್ನು ವೆಬ್ ವಿಳಾಸ www.kar.nic.in/finance ದಿಂದಲೂ ಪಡೆಯಬಹುದಾಗಿದೆ. ಮುದ್ರಿತ ಪ್ರತಿಯೊಂದಿಗೆ ತಂತ್ರಾಂಶ ಪ್ರತಿಯನ್ನು ವಿದ್ಯುನ್ಮಾನ ಅಂಚೆ ವಿಳಾಸ fincc.kar@nic.in ಗೆ ಕಳುಹಿಸಕೊಡತಕ್ಕದ್ದು.

**(ಅಜಯ್ ಸೇಠ್)**
ಸರ್ಕಾರದ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆ. ಮತ್ತು ಸಂ.)

ಇವರಿಗೆ:–

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತು ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳಿಗೆ.
3. ಸಚಿವಾಲಯದ ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರಿಗೆ.
4. ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಆರ್ಥಿಕ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಉಪ ಕಾರ್ಯದರ್ಶಿಗಳು, ವಿಶೇಷಾಧಿಕಾರಿಗಳು ಮತ್ತು ಅಧೀನ ಕಾರ್ಯದರ್ಶಿಗಳಿಗೆ.
8. ಆರ್ಥಿಕ ಇಲಾಖೆಯ ಎಲ್ಲಾ ಆಯವ್ಯಯ ತಯಾರಿಸುವ ಶಾಖೆಗಳಿಗೆ.
9. ಕಛೇರಿ ಪ್ರತಿ ಮತ್ತು ಹೆಚ್ಚುವರಿ ಪ್ರತಿಗಳು.

**ಅನುಬಂಧ–I**

**ಆಯವ್ಯಯ**

**ರಾಜಸ್ವ ಮತ್ತು ಬಂಡವಾಳ**

2010–11ನೇ ಸಾಲಿನ ಪರಿಷ್ಕೃತ ಅಂದಾಜುಗಳು ಮತ್ತು 2011–12ನೇ ಸಾಲಿನ

| ಲೆಕ್ಕ ಶೀರ್ಷಿಕೆ | 2010–11ರ ಆಯವ್ಯಯ ಅಂದಾಜುಗಳು | 2010–11ರ ಪರಿಷ್ಕೃತ ಅಂದಾಜುಗಳು | ಆಯವ್ಯಯ ಅಂದಾಜುಗಳು ಮತ್ತು ಪರಿಷ್ಕೃತ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ / ಇಳಿತ | ವ್ಯತ್ಯಾಸಗಳಿಗೆ ಕಾರಣಗಳು |
|---|---|---|---|---|
| | | | | |

**ಜಮೆ ಅಂದಾಜುಗಳ ನಿರೂಪಣಾ ಪಟ್ಟಿ**

ಆಯವ್ಯಯ ಅಂದಾಜುಗಳಲ್ಲಿ ವ್ಯತ್ಯಾಸಗಳನ್ನು ಸೂಚಿಸುವ ನಿರೂಪಣಾ ಪಟ್ಟಿ

| 2011–12ರ ಆಯವ್ಯಯದ ಅಂದಾಜುಗಳು | 2010–11 ರ ಪರಿಷ್ಕೃತ ಅಂದಾಜುಗಳು ಮತ್ತು 2011–12 ರ ಆಯವ್ಯಯ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ/ಇಳಿತ | ವ್ಯತ್ಯಾಸಗಳಿಗೆ ಕಾರಣಗಳು | ಆರ್ಥಿಕ ಇಲಾಖೆಯಲ್ಲಿ ಭರ್ತಿ ಮಾಡಲಾಗುವುದು | | |
|---|---|---|---|---|---|
| | | | 2009–10ರ ವಾಸ್ತವಿಕಗಳು | 2010–11ರ 6 ತಿಂಗಳ ವಾಸ್ತವಿಕಗಳು | ಆರ್ಥಿಕ ಇಲಾಖೆಯ ಅಭಿಪ್ರಾಯ |
| | | | | | |

## ಅನುಬಂಧ – II

(ಲಕ್ಷ ರೂ.ಗಳಲ್ಲಿ)

| ಒಟ್ಟು ಬಾಕಿ ಉಳಿಕೆ | ವರ್ಷಾವಾರು ವಿಂಗಡಣೆ | | ಮುಂದೂಡಲ್ಪಟ್ಟ / ವಿನಾಯಿತಿಗಳು | |
|---|---|---|---|---|
| | ವರ್ಷ | ಬಾಕಿ | ವರ್ಷ | ಮೊತ್ತ |
| | 2009–10 | | 2009–10 | |
| | 2008–09 | | 2008–09 | |
| | 2007–08 | | 2007–08 | |
| | 2006–07ರ ಅಂತ್ಯಕ್ಕೆ | | 2006–07ರ ಅಂತ್ಯಕ್ಕೆ | |

**ಅನುಬಂಧ– III**

(ಲಕ್ಷ ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಸಾಲ ಮಂಜೂರಾತಿ ಸಂಖ್ಯೆ ಮತ್ತು ದಿನಾಂಕ | ಸಾಲದ ಮೊತ್ತ | 2011–12ಕ್ಕೆ ಬಾಕಿ | |
|---|---|---|---|---|
| | | | ಅಸಲು | ಬಡ್ಡಿ |
| 1 | 2 | 3 | 4 | 5 |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

| ಮೇಲ್ಪಟ್ಟು ಬಾಕಿ ಉಳಿಕೆ | | | ವರ್ಷಾವಾರು ಮೇಲ್ಪಟ್ಟು ಬಾಕಿ ವಿಂಗಡಣೆ | | | | ಪಾವತಿಸದಿರುವುದಕ್ಕೆ ಕಾರಣಗಳು ಟಿ ಮತ್ತು ಸಿ ಮೇರೆಗೆ |
|---|---|---|---|---|---|---|---|
| ಅಸಲು | ಬಡ್ಡಿ | ದಂಡ ಬಡ್ಡಿ | ವರ್ಷ | ಅಸಲು | ಬಡ್ಡಿ | ದಂಡ ಬಡ್ಡಿ | |
| (6) | (7) | (8) | (9) | (10) | (11) | (12) | (13) |
| | | | **2009–10** | | | | |
| | | | **2008–09** | | | | |
| | | | **2007–08** | | | | |
| | | | **2006–07** | | | | |
| | | | **2005–06** | | | | |
| | | | **2004–05ರ ಅಂತ್ಯಕ್ಕೆ** | | | | |

**GOVERNMENT OF KARNATAKA**
**FINANCE DEPARTMENT**

**Budget**
**Top Priority**

Karnataka Government Secretariat
Room No.257, Vidhana Soudha
No. FD16 BPE 2010 Bangalore, Dated: 2nd November 2010.

# CIRCULAR

**Subject**.- Budget 2011-12 - Preparation of Revenue and Capital Receipts Estimates.

* * * * *

Reference is invited to the Budget Calendar for 2011-12 issued in Official Memorandum No. FD 14 BPE 2010, dated 15th October 2010.

2. On the formation of District Sector, some of the field Departments have been transferred to the ZP/TP/GP. As such, the Receipts realized by the ZP/TP/GPs shall be credited to the Consolidated Fund of the State. The Chief Controlling and Estimating Officers at the State Level should, therefore obtain the estimates of such receipts from the field Departments under the ZP/TP/GP and include them in their estimates.

3. The following instructions may be kept in view in arriving at the estimates under several Tax and Non-Tax items of Revenue Receipts.

(i) The assumption of the Tax Revenue Receipts should be based on the current rates of taxation duties imposed and fees levied under relevant Acts of the State Government. While arriving at the Revised Estimates for the current year over the assumptions envisaged earlier, the Estimating Officers should take into account relevant factors such as the target fixed, the progress of actuals and the anticipated additional yield from the measurers of enhancement of existing taxes, the estimated loss of revenue on account of abolition or reduction of taxes consequent to the implementation of such taxation laws passed by the State Legislature after the Budget Estimates were finalized and presented.

(ii) The Budget Estimates for the next financial year should not be merely a repetition of the Revised Estimates arrived for the current year but should take into account all relevant factors such as tax arrears to be collected, the demand for the coming year and assumption of a reasonable higher growth rate in respect of tax revenue and also the performance in the previous years, the progress / trend of actuals of the current year and the impact of the new measures of taxation referred to in paragraph 3(i).

(iii) A demand, collection and balance statement should also be sent along with the Estimates for Tax Revenue. The year-wise arrears should be shown separately as per the Annexure – II enclosed to this circular. Such information was not furnished by the Departments in previous years in spite of instructions in this regard.

4. (i) Non-tax revenue as a percentage of revenue Receipts has declined from 17% in 2004-05 to 6.78% in 2009-10. The ratio to non-tax revenue to GSDP has been negligible, mainly on account of low and declining cost recoveries, poor performance of public enterprises, implicit subsidies due to uneconomic pricing of irrigation, drinking water supply, higher & technical education and urban health services.

(ii) The analysis of outstanding loans given to government companies, corporations, local bodies, autonomous bodies, cooperative, non-government institutions etc., for developmental and non-developmental activities shows that while outstanding loans are increasing, repayments have remained stable. As at the end of March 2010, Rs. 8602 cr. is outstanding for recovery. Out of this Rs. 469.46 cr. of Principal and Rs. 846.26 cr. of interest are overdue from Statutory Corporations, Government Companies and autonomous bodies.

(iii) While the Government is borrowing at high cost from the market for its investment, the percentage of return on investments is much lower. One of the major reasons for the stagnation of non-tax revenue is lack of regular and periodic monitoring by the Administrative Departments and the non revision of user charges. The Eleventh Finance Commission had recommended that user charges should be index-linked to input costs and the process of periodic revision should become automatic.

(iv) **Therefore, all Administrative Departments should conduct a thorough review of all non-tax revenue sources and initiate action to revise the rates of non tax revenues / user charges.**

(v) **Similarly, efforts should be made to collect** interest receipts, dividends and capital recoveries from various public undertakings, cooperatives, autonomous bodies and other departmental loans based on the terms and conditions of the loans, investment made and periodicity of the repayments. Based on this, **the Departments should furnish realistic information for inclusion of estimates in Budget 2010-12.** There should be a strict monitoring mechanism in the Administrative Departments of achieve the Budget Estimates.

(vi) Explanation for variations between the Budget Estimates 2010-11 and Revised Estimates 2010-11 and between the Revised Estimates 2010-11 and Budget Estimates 2011-12 should be furnished in detail in the form (Annexure-I) enclosed showing item-wise variations between the estimates referred to above and specific reasons for decreases or increases as the case may be. Reasons furnished for the variations must be specific and in detail.

5. The financial year 2011-12, is the fifth year of the XI Five Year Plan Period 2007-2012. Resources will have to be raised for financing the annual plans, the committed expenditure of earlier plan period, the administrative expenditure including the increases sanctioned from time to time in respect of Dearness Allowance and the expenditure on relief works connected with Natural Calamities, maintenance of law and order and Social Welfare Measures. Heads of Departments are, therefore, requested to launch a vigorous drive for collection of arrears. Determined efforts should be made to step up collections under the sector 'Non-Tax Revenue' over the present level of collections. Heads of Departments are also requested to examine and indicate to the Government the possibilities of raising additional resources either from existing sources or from fresh sources. Such proposals for getting additional resources under 'Tax Revenue' may be treated as **'Top-Secret'** and proposal sent to the undersigned by name.

6. It has been a practice to exhibit a large proportion of the receipt estimates under the miscellaneous head **'other receipts'**. This should be avoided. Instead, efforts should be made to categorise the receipts under the distinctive sub heads available under that particular Major Head. All particulars that may be necessary for this purpose should be obtained from the subordinate Offices/Officers well in time so as to furnish the Estimates before the due dates.

7. There are number of loans sanctioned in the past in respect of which the balances are still outstanding. The estimates of loan receipts should be based on the anticipated recoveries during 2011-12 with reference to the outstanding balances and the terms and conditions of the relevant loan. The estimates should be accompanied with a D.C.B. Statement as per the Annexure – III.

8. The Estimating Officers have sufficient time to finalize the Estimates. The Receipts Estimates should therefore, be sent so as to reach the Finance Department positively by 20th November, 2010 and no room should be given for any delay on this account. All Budget correspondence should be addressed to Deputy Secretary to Government (B & R), Finance Department. Arrangements may be made to deliver Receipts estimates directly in the Budget Compilation and Committee Section of Finance Department (R. No. 257), to avoid delay in transit.

9. The Departments coming under the control of Secretariat Department having Internal Financial Advisers have to furnish the estimates to the concerned Internal Finance Adviser who in turn will forward them to Finance Department after detailed scrutiny.

10. This Circular as well as the Annexures are available on the website **www.kar.nic.in/finance**. Send soft copy in addition to hard copy to the email id: **fincc.kar@nic.in**

**(AJAY SETH)**
Secretary to Government
Finance Department (B&R).

To:

1. All the Principal Secretaries and Secretaries to Government
2. All Heads of Departments and Estimating Officers
3. The Internal Financial Advisers of the Secretariat
4. All Regional Commissioners
5. All Chief Executive Officers and C.A.O.s of Zilla Panchayats.
6. Deputy Commissioners of all Districts.
7. Additional Secretaries, Joint Secretaries, Deputy Secretaries, Special Officers and Under Secretaries to Government in Finance Department.
8. All Budget Compiling Sections in Finance Department.
9. Office Copy and Additional copies.

**ANNEXURE - I**

**Budget**

**Statement of Revenue &**

**Statement showing the variations in revised estimates for year 2010-11 and**

| Head of Account | Budget Estimates 2010-11 | Revised Estimates 2010-11 | Variations between Budget Estimates and Revised Estimates Increase/ Decrease | Reasons for Variations |
|---|---|---|---|---|
| | | | | |

**Capital Receipts Estimates by Major Head of Account**

**Budget Estimates for the year 2011-12**

| Budget estimates 2011-12 | Variations between Revised Estimates 2010-11 and Budget Estimates 2011-12 Increase / Decrease | Reasons for Variations | will be filled at Finance Department | | |
|---|---|---|---|---|---|
| | | | Accounts 2009-10 | Accounts for 6 months 2010-11 | Opinion of Finance Department |
| | | | | | |

**Annexure-II**

**(Rs. in Lakhs)**

| **Total Arrears Due** | **Yearwise Breakup** | | **Deferment/Exemptions** | |
|---|---|---|---|---|
| | **Year** | **Arrears** | **Year** | **Amount** |
| | 2009-10 | | 2009-10 | |
| | 2008-09 | | 2008-09 | |
| | 2007-08 | | 2007-08 | |
| | End of 2006-07 | | End of 2006-07 | |

## Annexure-III

**(Rs. in Lakhs)**

| Sl.No. | Loan Sanction No. & Date | Loan Amount | Due for 2011-12 | |
|---|---|---|---|---|
| | | | Principal | Interest |
| (1) | (2) | (3) | (4) | (5) |
| | | | | |
| | | | | |
| | | | | |
| | | | | |
| | | | | |
| | | | | |

| Over Due Arrears | | | Yearwise Breakup Over Due Arrears | | | | Reasons for Non-Payment As per T & C |
|---|---|---|---|---|---|---|---|
| Principal | Interest | Penal Interest | Year | Principal | Interest | Penal Interest | |
| (6) | (7) | (8) | (9) | (10) | (11) | (12) | (13) |
| | | | **2009-10** | | | | |
| | | | **2008-09** | | | | |
| | | | **2007-08** | | | | |
| | | | **2006-07** | | | | |
| | | | **2005-06** | | | | |
| | | | **End of 2004-05** | | | | |

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು